# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103

ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ/ತಾವಿ/2022-23/ 25 ದಿನಾಂಕ: 13.05.2022

## : ದರಪಟ್ಟಿ ಆಹ್ವಾನ :

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಸರ್. ಎಂ ವಿಶ್ವೇಶ್ವರಯ್ಯ ಸಭಾಂಗಣಕ್ಕೆ ಮೈಕ್‌ಸೆಟ್ ಹಾಗೂ ಸ್ಪೀಕರ್‌ಗಳನ್ನು ಖರೀದಿಸಿ ಅಳವಡಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.05.2022 (ಕಂಡಿಕೆ-05)

* * *

ತುಮಕೂರು ವಿಶ್ವವಿದ್ಯಾನಿಲಯದ ಸರ್. ಎಂ ವಿಶ್ವೇಶ್ವರಯ್ಯ ಸಭಾಗಂಣಕ್ಕೆ ಮೈಕ್‌ಸೆಟ್ ಮತ್ತು ಸ್ಪೀಕರ್‌ಗಳನ್ನು ಖರೀದಿಸಿ ಅಳವಡಿಸುವ ಕೆಲಸವನ್ನು ಕೊಟೇಷನ್ ಆಧಾರದಲ್ಲಿ ಕೆಲಸವನ್ನು ನಿರ್ವಹಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

### SCHEDULE-B

| S.N | DESCRIPTION OF THE ITEM | UNIT | QTY | Rate | Amount |
|---|---|---|---|---|---|
| 01 | Card less Mic 495 vhl | Set | 01 | | |
| 02 | Head Set | Set | 01 | | |
| 03 | Card Less Mic 700 v2 | Set | 01 | | |
| 04 | Podium Mic & Podium Stand | Set | 01 | | |
| 05 | 100 watts Speaker | Nos | 02 | | |
| 06 | 20 mtr Mic cable with Connectors | Set | 01 | | |

**ಷರತ್ತು ಮತ್ತು ನಿಭಂದನೆಗಳು:**

1) ಲಕೋಟೆಯ ಮೇಲೆ ತುಮಕೂರು ವಿಶ್ವವಿದ್ಯಾನಿಲಯದ ಸರ್. ಎಂ ವಿಶ್ವೇಶ್ವರಯ್ಯ ಸಭಾಂಗಣಕ್ಕೆ ಮೈಕ್‌ಸೆಟ್ ಹಾಗೂ ಸ್ಪೀಕರ್‌ಗಳನ್ನು ಖರೀದಿಸಿ ಅಳವಡಿಸುವ ಕೆಲಸದ ದರಪಟ್ಟಿ ಎಂದು ಸ್ಪಷ್ಟವಾಗಿ ನಮೂದಿಸಬೇಕು.
2) ಕ್ರಮಬದ್ಧವಾಗಿರದ ದರಪಟ್ಟಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
3) ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 20.05.2022 ಸಂಜೆ 4-00 ರವರೆಗೆ ಸಲ್ಲಿಸಬಹುದಾಗಿದ್ದು ದರಪಟ್ಟಿಗಳನ್ನು ಮುದ್ದಾಂ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು, ಯಾವುದೇ ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗಿರುವುದಿಲ್ಲ.
4) ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತರೆದ ದಿನಾಂಕದಿಂದ 60 ದಿನಗಳ ಅವಧಿಯವರೆಗೂ ಚಾಲ್ತಿಯಲ್ಲಿರಬೇಕು.
5) ಗುತ್ತಿಗೆದಾರರು ಸಂಬಂಧಿಸಿದ ಇಲಾಖೆಯಿಂದ ಪಡೆದ ವಿದ್ಯುತ್ ಗುತ್ತಿಗೆದಾರರ ಪರವಾನಿಗೆ ಪತ್ರವನ್ನು ಲಗತ್ತಿಸಬೇಕು.
6) ಸದರಿ ಐಟಂಗಳನ್ನು ಸರಬರಾಜು ಮಾಡಿ ಅಳವಡಿಸಲು ಮಾಡಲು ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
7) ದರಪಟ್ಟಿಯಲ್ಲಿ ನಮೂದಿಸಿರುವ ದರಗಳು ತೆರಿಗೆ ಮೊತ್ತ ಮತ್ತು ಸಾಗಣಿಕ ವೆಚ್ಚ ಮತ್ತು ಅಳವಡಿಸುವ ಮೊತ್ತವನ್ನು ಒಳಗೊಂಡಿರಬೇಕು.
8) ದರಪಟ್ಟಿಯಲ್ಲಿ ನಮೂದಿಸಿರುವ ಐಟಂಗಳ ಪರಿಮಾಣಗಳನ್ನು ಹೆಚ್ಚಿಗೆ/ಕಡಿಮೆ ಮಾಡುವ ಅಧಿಕಾರ ವಿಶ್ವವಿದ್ಯಾನಿಲಯಕ್ಕೆ ಇರುತ್ತದೆ.
9) ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೇ ರದ್ದುಗೊಳಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10) ದರಪಟ್ಟಿಗಳ ಆಯ್ಕೆಯಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.

11) ದರಪಟ್ಟಿಯಲ್ಲಿರುವ ಐಟಂಗಳ ಸಂರಚನೆಗೂ ಸರಬರಾಜು ಮಾಡುವ ಐಟಂಗಳ ಸಂರಚನೆಗೂ ವ್ಯತ್ಯಾಸ ಕಂಡುಬಂದರೆ ಅಂತಹ ಐಟಂಗಳನ್ನು ಪರಿಗಣಿಸುವುದಿಲ್ಲ.
12) ಪ್ರತಿ ಸಂಸ್ಥೆಯವರು ಏಕಮಾತ್ರ ದರಪಟ್ಟಿಯನ್ನು ಮಾತ್ರ ಸಲ್ಲಿಸುವುದು.
13) ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಬೇಕು.
14) ದರಪಟ್ಟಿಯನ್ನು ದಿನಾಂಕ 21.05.2022 ಬೆಳಿಗ್ಗೆ 11–00 ಗಂಟೆಗೆ ತೆರೆಯಲಾಗುವುದು.
15) ದರಪಟ್ಟಿಯನ್ನು ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು–572103 ಇವರಿಗೆ ತಲುಪಿಸುವುದು.
16) GST ಪ್ರತಿಯನ್ನು ಕಡ್ಡಾಯವಾಗಿ ದರಪಟ್ಟಿಯೊಂದಿಗೆ ಲಗತ್ತಿಸಬೇಕು.
17) ಮೇಲ್ಕಂಡ ಉಪಕರಣಗಳ ಗುಣಮಟ್ಟವು ತೃಪ್ತಿಕರವಾಗಿದ್ದು ಉತ್ತಮವಾಗಿರಬೇಕು, ಒಂದು ವೇಳೆ ತೃಪ್ತಿಕರವಾಗಿರದಿದ್ದಲ್ಲಿ ಅಂತವುಗಳನ್ನು ತಿರಸ್ಕರಿಸಲಾಗುವುದು.
18) ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಉಪಕುಲಸಚಿವರು

ಪ್ರತಿಗಳು
1) ಸೂಚನಾ ಫಲಕ, ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
3) ಕಚೇರಿ ಪ್ರತಿ.